# ✳ ಮೋಸಹೋಗಲು ಜನ ಸಿದ್ಧರಿರುವಾಗ ಮೋಸಮಾಡುವವರಿಗೆ ಬರವೇ? ✳

**ಶಿವನಕೆರೆ ಬಸವಲಿಂಗಪ್ಪ**

ಧರ್ಮ ಎಂದರೆ ಮೂಢ ನಂಬಿಕೆಗಳಲ್ಲ. ಧರ್ಮದ ಹೆಸರಿನಲ್ಲಿ ನಡೆಯುವ ವ್ಯಾಪಾರಗಳು ನೈಜ ಧರ್ಮಕ್ಕೆ ಕಳಂಕವನ್ನೇ ತರುತ್ತಿವೆ. ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ಧರ್ಮದ ವಿಷಯದಲ್ಲಿ ಯುಕ್ತಿಸಮ್ಮತವಾದುದನ್ನು ಮಾತ್ರ ಸ್ವೀಕರಿಸಬೇಕು ಎಂದು ಸ್ವಾಮಿ ವಿವೇಕಾನಂದರು ಸಾರಿ ಹೇಳುತ್ತಿದ್ದರು. ಈ ವಿಚಾರ ಸರಣಿಗೆ ಪುಷ್ಟಿ ನೀಡುವಂತಿರುವ ತಮ್ಮ ಅನಿಸಿಕೆಗಳನ್ನು ತಿಳಿಸಿರುವ ಲೇಖಕರು ದಾವಣಗೆರೆಯ ನಿವಾಸಿಗಳು.

ದಿನಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗುವ 'ಅತೀಂದ್ರಿಯ ಪವಾಡಗಳು'. 'ಫೋಟೋದಿಂದ ಜೇನುತುಪ್ಪ ಜಿನುಗುವ' ಸುದ್ದಿಗಳನ್ನು ಓದಿ ಈ ೨೧ನೇ ಶತಮಾನದ ವೈಜ್ಞಾನಿಕ ಯುಗ ದಲ್ಲೂ, ಅದರಲ್ಲೂ ಶೇ.೫೪ರಷ್ಟು ಇರುವ ಯುವ ಜನಾಂಗವೂ ಇಂತಹ ಪವಾಡಗಳಿಗೆ ಮಾರುಹೋಗುವರೆಂದರೆ ಬಹಳ ಆಶ್ಚರ್ಯವಾಗುತ್ತದೆ. ಹಾಗೆ ನೋಡಿದರೆ ಇಂತಹವೇನೂ ಹೊಸವಲ್ಲ. ಬುದ್ಧ, ಬಸವರ ಕಾಲದಿಂದಲೂ ಇಂತಹ ಪವಾಡ, ಮೋಡಿಗೊಳಿಸುವ ಕುಯುಕ್ತಿ, ಮಂಕುಬೂದಿ ಎರಚುವ ಕುಚೋದ್ಯಗಳ ಮೂಲಕ ಜನರನ್ನು ತಪ್ಪು ದಾರಿಗೆ ಎಳೆಯುವ ಕೆಲಸ ನಡೆದೇ ಇವೆ. ಆ ಕಾಲದ ಸಂತರು, ಮಹಾತ್ಮರು ಇಂತಹವನ್ನು ಅಲ್ಲಗಳೆದು ಜನರಿಗೆ ಸರಿಯಾದ ಮಾರ್ಗ ತೋರಿಸುತ್ತಾ ಬಂದಿದ್ದಾರೆ. ಒಮ್ಮೆ ರಾಮಕೃಷ್ಣ ಪರಮಹಂಸರಲ್ಲಿಗೆ ಒಬ್ಬ ಬಂದು, "ನಾನು ಆರು ವರ್ಷಗಳ ಕಾಲ ಕಷ್ಟ ಪಟ್ಟು ಸಾಧನೆಯನ್ನು ಮಾಡಿರುವೆ. ಈಗ ನದಿಯ ನೀರಿನ ಮೇಲೆ ನಡೆದು ಹೋಗಬಲ್ಲೆ," ಎಂದು ಕೊಚ್ಚಿಕೊಂಡಾಗ, "ಅಲ್ಲಯ್ಯಾ! ದೋಣಿಯವನಿಗೆ ಒಂದಾಣೆ ಕೊಟ್ಟಿದ್ದರೆ ಈ ಕೆಲಸ ಮಾಡುತ್ತಿದ್ದನಲ್ಲ. ಇದಕ್ಕಾಗಿ ನಿನ್ನ ಅಮೂಲ್ಯ ಜೀವನವನ್ನು ವ್ಯರ್ಥಮಾಡಿ ಕೊಂಡೆಯಲ್ಲಾ!" ಎಂದು ಪರಮಹಂಸರು ನುಡಿದ ಮಾತುಗಳು ಪವಾಡಗಳು, ಸಿದ್ಧಿಗಳು ಅತ್ಯಂತ ಕ್ಷುದ್ರ ಹಾಗೂ ಕ್ಷುಲ್ಲಕವಾದವುಗಳು ಎಂಬ ಸತ್ಯವನ್ನು ತಿಳಿಸುತ್ತದೆ. ಅವರ ಮಾತು ಎಲ್ಲ ಕಾಲಕ್ಕೂ ಅನ್ವಯಿಸುವಂಥದ್ದು.

ಸುಮಾರು ೨೦-೨೨ ವರ್ಷಗಳ ಹಿಂದೆ ದಾವಣಗೆರೆಯ ಸುತ್ತಮುತ್ತ 'ಕಡಬಾಸ್ವಾಮಿ' ಎಂದು ವೇಷ ಧರಿಸಿದ ಯುವಕ ಪವಾಡ ಮಾಡುತ್ತೇನೆಂದು ಹೇಳಿ, "ಕಣ್ಣಿಲ್ಲದವರಿಗೆ ಕಣ್ಣು, ಕಾಲಿಲ್ಲದವರಿಗೆ ಕಾಲು ಕೊಡುತ್ತೇನೆ. ಅದಕ್ಕಾಗಿ ನೀವು ಹುಣಸೆಕಟ್ಟೆ ಹತ್ತಿರದ ಆಲದ ಮರವನ್ನು ಮೂರು ಸಾರಿ ಸುತ್ತಬೇಕು, ನಿಮ್ಮ ಕನ್ನಡಕ, ಚಪ್ಪಲಿಗಳನ್ನು ಅಲ್ಲಿಯೇ ಬಿಡಬೇಕು" ಎಂದು ಮೂಢ ಜನರಿಗೆ ಕರೆಯಿತ್ತನು. ಅದರ ಪರಿಣಾಮವಾಗಿ ಹುಣಸೆಕಟ್ಟೆ ಪುಣ್ಯಕ್ಷೇತ್ರವಾಗಿ, ಚಪ್ಪಲಿ, ಕನ್ನಡಕಗಳ ರಾಶಿರಾಶಿ ಬಿದ್ದವೇ ಹೊರತು ಯಾರಿಗೂ ಕಣ್ಣೂ ಬರಲಿಲ್ಲ, ಕಾಲೂ ಬರಲಿಲ್ಲವೆನ್ನುವುದನ್ನು ನಮ್ಮ ಜನ ಮರೆತಂತೆ ಕಾಣುತ್ತದೆ. Public memory— ಸಾರ್ವಜನಿಕರ ನೆನಪಿನ ಶಕ್ತಿ—ಎನ್ನುವುದು ತೀರ ಅಲ್ಪಕಾಲಿಕವಾದದ್ದು. ನನಗೆ ಗೊತ್ತಿರುವ ಒಂದು ಕುಟುಂಬದವರು ಮಗನಿಗಿದ್ದ ಸರಿಪಡಿಸ ಲಾಗದ ಅಂಗವಿಕಲತೆಯನ್ನು ಸರಿಪಡಿಸಿಕೊಳ್ಳುವ ಸಲುವಾಗಿ ಆಗ ಹುಣಸೆಕಟ್ಟೆಯ ಆಲದಮರವನ್ನು ಸುತ್ತಿದ್ದರು. ಈಗಲೂ ಕೆಲವು ತಿಂಗಳುಗಳ ಹಿಂದೆ ಇಲ್ಲಿನ ದೇವಸ್ಥಾನದ ಮೈದಾನ ದಲ್ಲಿ ಅದೇನೋ ಪೂಜೆ ಮಾಡಿಸಿದರು. ಇತ್ತೀಚೆಗೆ ಪುನಃ ಮತ್ತೊಂದೆಡೆ ಹೋಗಿ ಜೇನುತುಪ್ಪ ಚಪ್ಪರಿಸಿ ಬಂದರು! ಸರಿಪಡಿಸಬಹುದಾದದ್ದನ್ನು ಮನುಷ್ಯಪ್ರಯತ್ನದಿಂದ ಖಂಡಿತ ಸರಿಪಡಿಸಬಹುದು. ಸರಿಪಡಿಸಲಾಗದ್ದನ್ನು ಯಾರೂ ಸರಿಪಡಿಸ ಲಾರರು. ಇವೆರಡರ ನಡುವೆ ಇರುವ ವಾಸ್ತವ ವ್ಯತ್ಯಾಸವನ್ನು ವಿವೇಚಿಸಬೇಕು. ಆದರೆ ನಮಗೆಲ್ಲ ಅಂಟಿರುವ ಜಾಡ್ಯವೆಂದರೆ ಆಸೆ, ಅತಿ ಆಸೆ, ದುರಾಸೆ, ಶ್ರಮಪಡದೆ ಭೋಗಿಸುವ ಇಚ್ಛೆ. ಈ ಜಾಡ್ಯವು ವಾಸ್ತವವನ್ನು ನಿರ್ಲಕ್ಷಿಸಿ ಭ್ರಮೆಯನ್ನು ಬೆನ್ನಟ್ಟುವಂತೆ ಮಾಡುತ್ತದೆ.

ಖ್ಯಾತ ವಿಚಾರವಾದಿ ದಿವಂಗತ ಎಚ್. ನರಸಿಂಹಯ್ಯ ನವರು ಬೆಂಗಳೂರಿನ ವಿಶ್ವವಿದ್ಯಾಲಯದ ಉಪಕುಲಪತಿ ಗಳಾಗಿದ್ದಾಗ, ಮಂಡ್ಯದ ಬಾಲಕ ಕೃಷ್ಣ ಎಂಬುವನು, ಬೂದಿ ಸೃಷ್ಟಿಸಿ ಜನರನ್ನು ಮರುಳು ಮಾಡುತ್ತಿದ್ದುದರ ಮೋಸವನ್ನು "ವಿಜ್ಞಾನ ವಿಚಾರ ಸಮಿತಿ"ಯ ಮೂಲಕ ಬಯಲಿಗೆಳೆದದ್ದನ್ನು ನಾವಿಲ್ಲಿ ಸ್ಮರಿಸಬಹುದು. "ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್" ವತಿಯಿಂದ ಮಂಗಳೂರಿನ ದಿವಂಗತ ಡಾ.ನಾಯಕ್ ಎಂಬುವರ ನೇತೃತ್ವದಲ್ಲಿ ಪವಾಡಗಳ ಬಗ್ಗೆ ಜನಸಾಮಾನ್ಯರಲ್ಲಿ, ವಿಶೇಷವಾಗಿ ಶಾಲಾಕಾಲೇಜುಗಳ ವಿದ್ಯಾರ್ಥಿಗಳಲ್ಲಿರುವ ಭ್ರಮೆಯನ್ನು ಹೋಗಲಾಡಿಸುವ ಪ್ರಯತ್ನ ಮಾಡಲಾಯಿತು. ಆದರೂ ನಾವು ಇಂತಹವುಗಳಿಗೆ ಮೋಸಹೋಗುವುದಾದರೆ ನಮ್ಮ ಮೂರ್ಖತನಕ್ಕೆ ಮದ್ದು ಇದೆಯೇ? ಅದಕ್ಕೇ ಒಂದು ಮಾತಿದೆ: "ಜನರು ಮೋಸಹೋಗಲು ಸದಾ ಸಿದ್ಧರಿದ್ದಾರೆ. ಮೋಸ ಮಾಡುವ ಹೊಸ ಹೊಸ ಭೂಪರು ಬೇಕು ಅಷ್ಟೆ!"

ಹಣವನ್ನು ಅನತಿ ಕಾಲದಲ್ಲಿ ದ್ವಿಗುಣಗೊಳಿಸುವವರು, ದಿಢೀರ್ ಶ್ರೀಮಂತರಾಗಲು ಅಡ್ಡದಾರಿ ತೋರಿಸಿ, ತನ್ಮೂಲಕ ತಾವು ಶ್ರೀಮಂತರಾಗುವ ಅನೇಕ ಮೋಸಗಾರರು, ಎಲ್ಲ ಒಡವೆಗಳನ್ನು ಕೊಟ್ಟರೆ ಮಂತ್ರ ಹೇಳಿ ಅವುಗಳನ್ನು ಎರಡು ಪಟ್ಟು ಮಾಡುವುದಾಗಿ ನಂಬಿಸಿ ಅದೆಷ್ಟು ಮಹಿಳೆಯರನ್ನು

ವಂಚಿಸಿದ್ದಾರೆ! ಮಕ್ಕಳಾಗಲು ಇಂತಹ ದಾನ, ಪೂಜೆ ಮಾಡಿ ಎಂದು ವಿಶ್ವಾಸ ಹುಟ್ಟಿಸಿ ಮಾನಸಿಕ ಯಾತನೆ ನೀಡುವ ತಜ್ಞರು(?) ಎಷ್ಟಿಲ್ಲ! ಇವರಿಗೆ ಕಾನೂನಿನಡಿ ಶಿಕ್ಷೆಯಿದ್ದರೂ ಸಾರ್ವಜನಿಕರನ್ನು ವಂಚಿಸಲು "ಧಾರ್ಮಿಕ ಲೇಪ" ಬಳಿದು ಕೊಂಡು ಅಂತಹ ಕಾನೂನಿನ ಕಣ್ಣಿಗೇ ಮಣ್ಣೆರೆಚುವ ಭೂಪರು ಇವರು! ಇದಕ್ಕೆ ಪರಿಹಾರವಿಲ್ಲವೆಂದಲ್ಲ—ಜನರು ಜಾಗೃತರಾಗಿ ವಿಚಾರವಂತರಾಗಬೇಕು ಅಷ್ಟೆ.

ಹೀಗೆ ಮೋಸಹೋಗುವವರಲ್ಲಿ ವಿದ್ಯಾವಂತರೂ ಇರುತ್ತಾರೆಂಬುದೇ ದುರಂತದ ವಿಷಯ! ಅದರಲ್ಲೂ ರಾಜಕಾರಣಿಗಳ, ಶ್ರೀಮಂತರ ದಂಡೇ ಇಂತಹ ವಂಚಕರ ಮನೆಯ ಮುಂದೆ ಜಮಾಯಿಸಿರುತ್ತದೆ. ಇದಕ್ಕೆ ಮೂಲಭೂತ ಕಾರಣ ಪ್ರತಿಯೊಬ್ಬರನ್ನೂ ಸದಾ ಪೀಡಿಸುವ "ನಾನು ಏನೋ ಆಗಬೇಕು" ಎನ್ನುವ ಆಕಾಂಕ್ಷೆ. ಈಗಿಂದೀಗಲೇ, ಆನ್‌ಲೈನ್ ಲಾಟರಿ ಹೊಡೆದಂತೆ, ತಕ್ಷಣವೇ ಪ್ರಸಿದ್ಧನಾಗಬೇಕು, ಹಣವಂತನಾಗಬೇಕು ಎಂಬ ಅಭಿಲಾಷೆ. ಭರ್ಜರಿ ಹಣ, ಉತ್ತಮ ಆರೋಗ್ಯ, ಭೋಗವಸ್ತುಗಳು, ಸುಖ, ಪ್ರತಿಷ್ಠೆ, ಕೀರ್ತಿ—ಇವೆಲ್ಲ ಯಾವ ಪರಿಶ್ರಮವೂ ಇಲ್ಲದೆ ಅಥವಾ ಕಡಿಮೆ ಪ್ರಯತ್ನದಿಂದ; ಪ್ರಾಮಾಣಿಕತೆ, ಸೇವೆ, ತ್ಯಾಗಗಳಾವುದರ ಹಂಗಿಲ್ಲದೆ ಪವಾಡಸದೃಶವಾದ ರೀತಿಯಲ್ಲಿ ಲಭ್ಯವಾಗಬೇಕು. ಆದರೆ ಎಂದಾದರೂ ಹೀಗಾಗಲು ಸಾಧ್ಯವೇ? ಉದಾಹರಣೆಗೆ ಉತ್ತಮ ಆರೋಗ್ಯ ಬೇಕು ಎಂದರೆ ಪೌಷ್ಟಿಕ ಆಹಾರ ಸೇವನೆ, ವ್ಯಾಯಾಮ, ಒಳ್ಳೆಯ ಹವ್ಯಾಸಗಳು ಅತ್ಯಗತ್ಯ. ಆದರೆ ನಾವು ಸೇವಿಸುವುದು ಉದ್ರಿಕ್ತಗೊಳಿಸುವ ರಸ್ತೆಬದಿಯ ಆಹಾರ, ಫಾಸ್ಟ್ ಫುಡ್, ಪೆಪ್ಸಿ ಹಾಗೂ ಮದ್ಯಗಳನ್ನು. ಇದರೊಂದಿಗೆ ದೈಹಿಕ ಪರಿಶ್ರಮವಿಲ್ಲದ ಜೀವನ. ಅಗತ್ಯವೇ ಇಲ್ಲದ ವಸ್ತುಗಳನ್ನು ಪ್ರತಿಷ್ಠೆಗಾಗಿ ಸಾಲಮಾಡಿಯಾದರೂ ತೆಗೆದುಕೊಳ್ಳುವ ಕೊಳ್ಳುಬಾಕ ಸಂಸ್ಕೃತಿಯಲ್ಲಿ ಟೆನ್ಷನ್, ಸ್ಟ್ರೆಸ್, ಒತ್ತಡಗಳು ಆಧುನಿಕ ಜೀವನದ ಅವಿಭಾಜ್ಯ ಅಂಗವಾಗಿರುವಾಗ ನಮ್ಮ ಆರೋಗ್ಯ ಹೇಗೆ ತಾನೇ ಚೆನ್ನಾಗಿರಲು ಸಾಧ್ಯ? ನಾವು ಸರಳ, ನೇರ ಮಾರ್ಗ ಬಿಟ್ಟು ದುಶ್ಚಟಗಳಿಗೆ ದಾಸರಾಗಿ ಪವಾಡಪುರುಷರು, ಕವಡೆಸಿದ್ಧರು, ಕಣಿ ಹೇಳುವವರು, ವಾಸ್ತು ಪಂಡಿತರನ್ನು ದುರಾಸೆಯಿಂದ ಬೆನ್ನು ಹತ್ತಿದರೆ ಪರಾವಲಂಬಿ ಜೀವಿಗಳಾದ ಅವರು ನಮಗೆ ಟೋಪಿ ಹಾಕದೆ ಬಿಟ್ಟಾರೆಯೇ? ಅದಲ್ಲದೆ ಇಂತಹ ever prospering, never loss business—ಎಂದೂ ನಷ್ಟವಿಲ್ಲದ ಕೇವಲ ಲಾಭದಾಯಕವಾದ ಉದ್ಯಮದಿಂದ ಅವರು ಕೋಟ್ಯಧೀಶರಾಗುತ್ತ, ದೇವರ ಹೆಸರಿನಲ್ಲಿ ವ್ಯಾಪಾರ ನಡೆಸುತ್ತಿದ್ದಾರೆ ಅಷ್ಟೆ!

ಇಂತಹ ಪವಾಡಪುರುಷರ ಬಲೆಗೆ ಬೀಳಲು ಮತ್ತೊಂದು ಕಾರಣ, ನಮ್ಮನ್ನು ಕಾಡುವ ಅಭದ್ರತೆ, ಭಯ. 'ನನಗೆ ಜೀವನದಲ್ಲಿ ಎಂದೂ ಕಷ್ಟಗಳೇ ಬರಬಾರದು. ನನ್ನ ಮಕ್ಕಳು, ಮನೆತನ ಶ್ರೀಮಂತಿಕೆಯಲ್ಲಿ ಓಡಾಡಬೇಕೇ ಹೊರತು, ಎಂದೂ ಬವಣೆ ಪಡಬಾರದು, ಯಾವುದೇ ನಷ್ಟವಾಗಬಾರದು, ಆರೋಗ್ಯ ಕೆಡಬಾರದು, ಸಾವು ಬರಬಾರದು ಇತ್ಯಾದಿ ಇತ್ಯಾದಿ.' ಆದರೆ ಹೀಗಾಗಲು ಸಾಧ್ಯವೇ? ಜನಕ ಮಹಾರಾಜ ಜಾತಕ ನೋಡಿಯೇ ಸೀತೆಯ ಮದುವೆ ಮಾಡಿದರೂ, ಆಕೆಗೆ ವನವಾಸ ತಪ್ಪಲಿಲ್ಲ. ಕಷ್ಟಗಳು ಬಂದೇ ಬರುತ್ತವೆ. ಅವನ್ನು ಎದುರಿಸಿ ನಿವಾರಣೆ ಮಾಡಿಕೊಳ್ಳಬೇಕು, ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ನಮ್ಮ ಕಾಲದಲ್ಲೇ ೯೭ ವರ್ಷ ಬಾಳಿ ಬದುಕಿದ ಮಾಗನೂರು ಬಸಪ್ಪ, ಬೆಳಗೆರೆ ಕೃಷ್ಣಶಾಸ್ತ್ರಿಗಳು ಅಥವಾ ಮಲ್ಲಾಡಿ ಹಳ್ಳಿಯ 'ತಿರುಕ' ರಾಘವೇಂದ್ರ ಗುರೂಜಿ—ಇವರುಗಳ ಆರೋಗ್ಯಭಾಗ್ಯ, ಪರಿಶ್ರಮ, ಸಮಾಜಸೇವೆಯಿಂದ ಸಹಜವಾಗಿ ಲಭಿಸಿದ ಕೀರ್ತಿ ಇತ್ಯಾದಿ ಉದಾಹರಣೆಗಳು ನಮ್ಮ ಮುಂದೆಯೇ ಇವೆ. ಇಂತಹ ವ್ಯಕ್ತಿಗಳು ಹುಡುಕಿದರೆ ಎಲ್ಲ ಊರಿನಲ್ಲೂ ಸಿಗುತ್ತಾರಾದರೂ ಇವರದು ಕಷ್ಟದ ದಾರಿಯಾದ್ದರಿಂದ ಇದು ನಮಗೆ ಬೇಡ. ಆದರೆ ವಾಸ್ತವವಾಗಿ ಅದೇ ನಿಜವಾದ ಸಾರ್ಥಕವಾದ ಜೀವನಮಾರ್ಗ.

ನಮ್ಮ ಜೀವನ ಸುಖವಾಗಿರಲು ಪ್ರಾಮಾಣಿಕ ಶ್ರಮ, ಮಿತ ಕುಟುಂಬ, ಸರಳ ಜೀವನ, ಸತ್ಸಂಗ, ಸನ್ಮಾರ್ಗದರ್ಶಿಯಾದ ಅನುಭಾವಿಗಳ ಪ್ರಖರವಾದ ವಿಚಾರಗಳಿಂದ ಸಾಧ್ಯವೇ ಹೊರತು ಪವಾಡಪುರುಷರಿಂದ, ದೇವರ ಹೆಸರಿನಲ್ಲಿ ಅಥವಾ ಯಾವುದೋ ಸಂತನ ಪ್ರೇತ ತನ್ನೊಳಗೆ ಹೊಕ್ಕಿದೆ ಎಂದು ಸುಳ್ಳುಗಳನ್ನು ಹೇಳಿಕೊಂಡು ವಂಚಿಸುತ್ತಿರುವ ಆಷಾಢಭೂತಿಗಳಿಂದ ಅಲ್ಲ. ಇದರಿಂದ ಅವರು ಆ ಸಂತರ ಹೆಸರಿಗೆ ಮಸಿ ಬಳಿದು ತಾವು ಜನರಿಂದ ಹಣವನ್ನು ಸುವ್ಯವಸ್ಥಿತವಾಗಿ ದೋಚುತ್ತಿದ್ದಾರೆ ಅಷ್ಟೆ. ಇಂತಹವರ ಹಿಂದೆ ಬಿದ್ದರೆ ನಮ್ಮ ಜೀವನ ಮತ್ತಷ್ಟು ಗೊಂದಲ, ದುಃಖ, ನಿರಾಸೆ, ದಾರಿದ್ರ್ಯಕ್ಕೊಳಗಾಗುತ್ತದೆಯೇ ಹೊರತು ಯಾವ ಪ್ರಯೋಜನವೂ ಆಗುವುದಿಲ್ಲವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕೆ? ✪

**ಬೆಳಕನ್ನು ಕಂಡರೆ ಭೀತಿ!**

ಒಂದು ದೊಡ್ಡ ಬಂಡೆಯನ್ನು ಪಕ್ಕಕ್ಕೆ ಸರಿಸಿದಾಗ ಅದರಡಿಯಲ್ಲಿ ಬಹಳ ಕಾಲದಿಂದ ವಾಸವಾಗಿದ್ದ ನಾನಾ ಬಗೆಯ ಹುಳು ಹುಪ್ಪಟೆಗಳು ಬೆಳಕನ್ನು ತಾಳಲಾರದೆ ಅತ್ತಿತ್ತ ಓಡಲಾರಂಭಿಸಿದವು. ಕತ್ತಲೆಯ ಜೀವನಕ್ಕೆ ಅವು ಎಷ್ಟೊಂದು ಒಗ್ಗಿಹೋಗಿದ್ದವೆಂದರೆ ಬೆಳಕು ಅವುಗಳಿಗೆ ಬೇಡವಾಗಿತ್ತು. ಮತ್ತೆ ಆ ಕಲ್ಲನ್ನು ಅದರ ಹಿಂದಿನ ಸ್ಥಳಕ್ಕೆ ತಂದಾಗ ಅದೇನು ಸಂಭ್ರಮದಿಂದ ಹಿಂದಿರುಗಿದವು! ಮತ್ತೆ ಕತ್ತಲೆಯ ಸ್ಥಳ, ತಮ್ಮ ಹಿಂದಿನ ಆಶ್ರಯ ಸಿಕ್ಕಿತು ಎಂಬ ಧನ್ಯತಾಭಾವದಿಂದ ಸೇರಿಕೊಂಡವು!